ಶ್ರೀ ಕೆ.ಎಸ್. ಈಶ್ವರಪ್ಪ:- ಜಿಲ್ಲಾ ಪರಿಷತ್ತಿನ ಇಂಜನೀಯರಗಳನ್ನು ಮತ್ತು ಯಾರನ್ನು ಕೇಳಿದರೂ ಕೂಡ ಅವರು ಅಭಿವೃದ್ಧಿ ಮಂಡಳಿಯವರ ಕಡೆ ತೋರಿಸುತ್ತಾರೆ. ಕನಿಷ್ಟ ನೂರು ಕೋಟಿ ರೂಪಾಯಿಗಳಾದರೂ ಬಿಡುಗಡೆ ಮಾಡಬೇಕಾಗುತ್ತದೆ. ಇಲ್ಲ ಎಂದರೆ, ಅದಕ್ಕೆ ಅರ್ಥವೇ ಇಲ್ಲ.

**3) ಮೈಸೂರು ಡೈರಿ ಒಕ್ಕೂಟದಲ್ಲಿ ನಡೆಯಿತೆನ್ನಲಾದ ಅವ್ಯವಹಾರ.**

ಶ್ರೀ ಆರ್.ವಿ. ದೇಶಪಾಂಡೆ:- ಮಾನ್ಯ ಅಧ್ಯಕ್ಷರೆ, ಮೈಸೂರು ಡೈರಿ ವಿಚಾರದಲ್ಲಿ ನಾವು ಮತ್ತು ವಾಟಾಳ್ ನಾಗರಾಜ್ ಅವರು ತಮ್ಮ ಅನುಮತಿ ಕೇಳಿದ್ದೇವೆ. ಸಾಕಷ್ಟು ದುರ್ವ್ಯವಹಾರಗಳು ನಡೆದಿವೆ. ಕಳೆದ ನವೆಂಬರ್ ಮತ್ತು ಡಿಸೆಂಬರ್ ಈ ಎರಡು ತಿಂಗಳಲ್ಲಿ 50-60 ಲಕ್ಷ ರೂಪಾಯಿಗಳ ಹಾನಿ ಈ ಸಂಸ್ಥೆಗೆ ಆಗಿದೆ. ಏನು ಮಿಲ್ಕ್ ಪ್ರಕ್ಯೂರ್‌ಮೆಂಟ್ ಆಗಿದೆ ಅದರ ಬೆಲೆಯನ್ನು ರೈತರಿಗೆ ಕೊಟ್ಟಿಲ್ಲ. ಅಷ್ಟೇ ಅಲ್ಲ ಹಣವನ್ನು ದುರುಪಯೋಗ ಮಾಡಿಕೊಂಡು ಮಾರುತಿ ಕಾರು ಇಂಥ ವಾಹನಗಳನ್ನು ಖರೀದಿ ಮಾಡಿದ್ದಾರೆ. ಹಾಗಾಗಿ ಇವತ್ತು ರೈತರು ಬಹಳ ಕಷ್ಟದಲ್ಲಿ ಇದ್ದಾರೆ ಮತ್ತು ಮ್ಯಾನೆಜ್‌ಮೆಂಟ್‌ನವರು ಉದ್ದೇಶಪೂರ್ವಕವಾಗಿ ಎಂಪ್ಲಾಯ್ಸ್‌ನಲ್ಲಿ ಡಿಫರೆನ್ಸಸ್ ತರಬೇಕು ಎಂದು ಮಾಡಿದ್ದಾರೆ. ಈಗಾಗಲೇ ಅಲ್ಲಿ ಮೂರು ಯೂನಿಯನ್‌ಗಳು ಕ್ರೀಯೇಟ್ ಆಗಿವೆ. ಅದರಲ್ಲಿ ಒಂದು ಪ್ರಕ್ಯೂರ್‌ಮೆಂಟ್ ಯೂನಿಯನ್‌ನಲ್ಲಿದ್ದ ಜನರಲ್ ಸೆಕ್ರೆಟರಿಯನ್ನು ಸಸ್ಪೆಂಡ್ ಮಾಡಿದ್ದಾರೆ. ನಾಲ್ಕು ಜನ ಸಿಬ್ಬಂದಿಯನ್ನು ವರ್ಗ ಮಾಡಿದ್ದಾರೆ. ಹಾಗೂ ನಮ್ಮ ಕಂದಾಯ ಸಚಿವರು ಅಲ್ಲಿಗೆ ಹೋಗಿದ್ದಾಗ ಅವರಿಗೆ ಒಂದು ಮನವಿಯನ್ನು ಕೊಟ್ಟಿದ್ದಾರೆ ಎಂದು ತಿಳಿದುಬಂದಿದೆ. ಅಲ್ಲಿ ಏನು ದುರ್ವ್ಯವಹಾರ ನಡೆದಿದೆ ಅದರ ಬಗ್ಗೆ ತನಿಖೆ ಸಹ ಮಾಡಬೇಕು, ಎಂದು ತಮ್ಮ ಮುಖಾಂತರ ಸರ್ಕಾರವನ್ನು ಒತ್ತಾಯ ಮಾಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಅಧ್ಯಕ್ಷರೆ, ಇದೇ ವಿಚಾರದಲ್ಲಿ ತಮ್ಮ ಗಮನ ಸೆಳೆಯಲು ಪ್ರಯತ್ನ ಪಡುತ್ತೇನೆ. ಮೂರು ವರ್ಷಗಳಿಂದ ಮೈಸೂರು ಡೈರಿ ಒಕ್ಕೂಟದ ಚುನಾವಣೆ ಆಗಿಲ್ಲ. ಇದೇ ರೀತಿಯಲ್ಲಿ ಚುನಾವಣೆಯನ್ನು ಮುಂದೂಡಿಕೊಂಡು ಹೋಗುತ್ತಿದ್ದಾರೆ. ಸರ್ಕಾರ ಇದರ ಬಗ್ಗೆ ತೀವ್ರವಾಗಿ ಕ್ರಮ ಕೈಗೊಳ್ಳಬೇಕು. ಮತ್ತು ಅಲ್ಲಿ ನಷ್ಟದಲ್ಲಿ ನಡೆಯುತ್ತಿರುವಂತಹ ಒಕ್ಕೂಟ ಇದ್ದರೂ, ಅಲ್ಲಿನ ಅಧಿಕಾರಿವರ್ಗದವರು ತಮ್ಮ ಸ್ವಂತ ಲಾಭಕ್ಕಾಗಿ ಹೊಸ ಹೊಸ ಮೊಟಾರು ವಾಹನಗಳನ್ನು ಪಡೆದು ಓಡಾಡುವಂತಹ ವ್ಯವಸ್ಥೆ ಮಾಡಿದ್ದಾರೆ. ಅಲ್ಲಿರತಕ್ಕ ಪ್ರಾಮಾಣಿಕವಾದ ಅಧಿಕಾರಿಗಳನ್ನು ಇದ್ದಕ್ಕಿದ್ದಂತೆ ವರ್ಗ ಮಾಡಿದ್ದಾರೆ. ಮಾರ್ಚ್-ಏಪ್ರಿಲ್ ಯಾವುದನ್ನು ನೋಡದೆ ಮಧ್ಯಂತರ ವರ್ಷದಲ್ಲಿ ಉದ್ದೇಶಪೂರ್ವಕವಾಗಿ ಕೆಲವರನ್ನು ವರ್ಗ ಮಾಡಿದ್ದಾರೆ. ಪ್ರತಿನಿತ್ಯ ಹಾಲು ಕೊಟ್ಟವರಿಗೆ ಹಣ ಕೊಡುತ್ತಿದ್ದರು, ಈಗ ಒಂದು ವಾರ ಅಲ್ಲ, ತಿಂಗಳಾನುಗಟ್ಟಲೆ ಆದರೂ ಹಣವನ್ನು ಕೊಡುತ್ತಿಲ್ಲ. ಚಾಮರಾಜನಗರ ತಾಲ್ಲೂಕು ಒಂದರಲ್ಲೇ ಇಡೀ ಮೈಸೂರು ಜಿಲ್ಲೆಯಲ್ಲಿ ಒಕ್ಕೂಟಕ್ಕೆ ಬರತಕ್ಕಂತಹ ಹೆಚ್ಚಿನ ಹಾಲು ಬರುತ್ತದೆ. ಅಲ್ಲಿಗೆ ಬರತಕ್ಕ ಹಾಲನ್ನು ಪರಿಶುದ್ಧವಾಗಿ ಇಟ್ಟುಕೊಳ್ಳದೆ, ಸರಿಯಾದ ವ್ಯವಸ್ಥಿತವಾದ ಶೀತಲೀಕರಣದ ವ್ಯವಸ್ಥೆ ಇಲ್ಲದೆ 27 ಸಾವಿರ ಲೀಟರ್ ಹಾಲನ್ನು ಬೀದಿಗೆ ಸುರಿದಿದ್ದಾರೆ. ಮತ್ತು ಅಲ್ಲಿ ಬೇಜವಬ್ದಾರಿಯಿಂದ ಆಡಳಿತ ನಡೆಯುತ್ತಿದೆ. ಸಮಗ್ರವಾಗಿ ಈ ಒಕ್ಕೂಟದ ಅವ್ಯವಹಾರದ ಬಗ್ಗೆ ನ್ಯಾಯಾಂಗ ತನಿಖೆಯಾಗಬೇಕು. ಈ ಬಗ್ಗೆ ವಜಾ ಮಾಡಿರುವಂಥ ಅಧಿಕಾರಿಗಳನ್ನು ಪುನಃ ನೇಮಕಾತಿ ಮಾಡಿಕೊಳ್ಳುವಂತೆ ತಮ್ಮ ಮೂಲಕ ಸರ್ಕಾರವನ್ನು ಪ್ರಾರ್ಥನೆ ಮಾಡುತ್ತಿದ್ದೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ:- ಒಬ್ಬ ಅಧಿಕಾರಿ ಮೇಲೂ ದೂರು ಇಲ್ಲ. ಉದ್ದೇಶಪೂರ್ವಕವಾಗಿ ವರ್ಗಾವಣೆ ಮಾಡಿದ್ದಾರೆ. ಅವ್ಯವಹಾರಗಳನ್ನು ಮಾಡಿದ್ದಾರೆ. ಇದು ಅವರಿಗೆ ಸಂಬಂಧ ಇಲ್ಲ. ಜನಗಳಿಗೆ ಗೊತ್ತಾಗಿದೆ; ಬಹಿರಂಗ ಮಾಡಿದ್ದಾರೆ. ಅಧಿಕಾರಿಗಳ ಮೇಲೆ ಹೊಣೆ ಹೊರಿಸಿ 24 ಗಂಟೆಗಳಲ್ಲಿ ವರ್ಗ ಮಾಡಿ, ಗೊಂದಲ ವಾತಾವರಣ ನಿರ್ಮಾಣ

ಮಾಡಿದ್ದಾರೆ. ದಯಮಾಡಿ ವಿನಾಕಾರಣ ವರ್ಗ ಮಾಡಿರುವುದನ್ನು ರದ್ದು ಮಾಡುವ ಬಗ್ಗೆ ಗಮನಹರಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಜಿಲ್ಲಾ ಮಂತ್ರಿಗಳಾದ ರಾಜಶೇಖರ ಮೂರ್ತಿಯವರಿಗೂ ಸಹ ಮನವಿ ಕೊಟ್ಟಿದ್ದಾರೆ. ಅಲ್ಲಿನ ಜನರ ಪರಿಸ್ಥಿತಿ ಆಗಿರತಕ್ಕಂಥ ಅನ್ಯಾಯವನ್ನು ತಪ್ಪಿಸಿ ಎಂದು ಹೇಳಿದ ತಕ್ಷಣ ಅಲ್ಲಿದಂತಹ ಅಧಿಕಾರಿಗಳನ್ನು ರಾತ್ರೋರಾತ್ರಿ ನಾಲ್ಕೈದು ಅಧಿಕಾರಿಗಳನ್ನು ವರ್ಗ ಮಾಡಿದ್ದಾರೆ. ಈ ಬಗ್ಗೆ ಸರ್ಕಾರದ ನಿಲುವು ಏನು?

ಶ್ರೀ ಜೆ.ಸಿ. ಮಾಧುಸ್ವಾಮಿ:- ರೈತರಿಗೆ 7-8 ವಾರಗಳ ಹಾಲಿನ ಬಿಲ್ಲು ಪೇಮೆಂಟ್ ಮಾಡಿಲ್ಲ, ಒಟ್ಟು 5 ಒಕ್ಕೂಟಗಳಲ್ಲಿ ಧಾರಣೆಯನ್ನು ಜಾಸ್ತಿ ಮಾಡಬೇಕಾದರೆ ವಿಧಾನಸಭೆಗೆ ಬರುತ್ತದೆ. ಮಂತ್ರಿ ಮಂಡಲದಲ್ಲಿ ಚರ್ಚೆ ಆಗುತ್ತದೆ. ಆದರೆ ಇಲ್ಲಿ 80-50 ಪೈಸೆ ಧಾರಣೆಯನ್ನು ಇಳಿಸಬೇಕಾದರೆ ಯಾರನ್ನೂ ಕೇಳಿಲ್ಲ. ಇದರಿಂದ ರೈತರಿಗೆ ಬಹಳ ಅನ್ಯಾಯವಾಗುತ್ತಿದೆ. ಏಕಾಏಕಿ ಹಾಲು ತೆಗೆದುಕೊಳ್ಳುವುದಿಲ್ಲ ಎಂದು ನೋಟೀಸು ಕೊಡುತ್ತಾರೆ. ಲಕ್ಷಾಂತರ ಲೀಟರು ಹಾಲನ್ನು ಏನು ಮಾಡಬೇಕು ಎಂಬುದಕ್ಕೆ ಉತ್ತರವನ್ನು ಹೇಳುವವರಿಲ್ಲ ಇದ್ದಕ್ಕಿದ್ದ ಹಾಗೆ 30-50 ಪೈಸೆ ಧಾರಣೆಯನ್ನು ಕಡಿಮೆ ಮಾಡುತ್ತಾರೆ. ಇದು ನ್ಯಾಯವೇ ಅವರು ಸರ್ಕಾರದ ಅನುಮತಿಯನ್ನು ಇದಕ್ಕೆ ತೆಗೆದುಕೊಂಡಿಲ್ಲ 7-8 ವಾರಗಳ ಪೇಮೆಂಟು ಆಗದೇ ಇರುವುದರಿಂದ ರೈತರು ಕಂಗಾಲಾಗಿದ್ದಾರೆ. ಸರ್ಕಾರವು ಕೊನೆಯ ಪಕ್ಷ ಅವರ ಹಾಲಿಗೆ ಪೇಮೆಂಟ್ ಆದರೂ ಕೂಡಲೇ ಮಾಡಿಸಬೇಕು.

ಶ್ರೀ ಸಿ. ಬೈರೇಗೌಡ:- ಫ್ಲಷ್ ಸೀಸನ್ ಎಂದು ಹೇಳಿ ರೈತರು ಉತ್ಪಾದನೆ ಮಾಡತಕ್ಕ ಹಾಲಿಗೆ 30-50 ಪೈಸೆ ಕಡಿಮೆ ಮಾಡುತ್ತಾರೆ.. ಇವತ್ತು ಇಲ್ಲಿ ಇರತಕ್ಕ ಪ್ರಶ್ನೆ ಏನೆಂದರೆ, ಹಸು ಹಾಲನ್ನು ಕರಿಯುತ್ತದೆ ಎಂದು ಬೆಲೆ ಕಡಿಮೆ ಮಾಡುವುದು ಸರಿಯೇ, ಹಸು ಹಾಲು ಕರಿಯುವುದು ಕರಿಯುತ್ತಲೇ ಇರುತ್ತದೆ. ಅದಕ್ಕೆ ಏನೇನು ಹಾಕಬೇಕು ಅದನ್ನೆಲ್ಲಾ ಹಾಕಬೇಕು, ಅಂದರೆ ಮೇವು, ಮತ್ತೊಂದು ಔಷಧ ಅಷ್ಟನ್ನು ಮಾಡಲೇಬೇಕು ಅವುಗಳ ಬೆಲೆ ಏನೂ ಕಡಿಮೆ ಆಗಿಲ್ಲ. ಇವರು ಧಿಡೀರನೆ ಹಾಲಿನ ಬೆಲೆ ಇಳಿಸುವುದು ರೈತರಿಗೆ ಗೊತ್ತಾಗುವುದಿಲ್ಲ, ಬಿಲ್ ಬಂದಾಗ ಗೊತ್ತಾಗುತ್ತದೆ ಹಾಲಿನ ಬೆಲೆ ಕಡಿಮೆ ಕೊಟ್ಟಿದ್ದಾರೆ ಎಂದು. ಮತ್ತೊಂದು ಪ್ರಶ್ನೆ ಏನೆಂದರೆ ಇವರು ಗ್ರಾಹಕರಿಗೆ ಏನೂ ಬೆಲೆಯನ್ನು ಕಡಿಮೆ ಮಾಡಿಲ್ಲ. ಒಂದು ಕಡೆ ಗ್ರಾಹಕರಿಗೆ ಮೋಸ, ಇನ್ನೊಂದು ಕಡೆ ಉತ್ಪಾದಕರಿಗೆ ಮೋಸ ಆಗುತ್ತಿದೆ. ಸರ್ಕಾರದಲ್ಲಿ ಏನು ನಡೆಯುತ್ತಿದೆ ಎಂಬುದು ಗೊತ್ತಾಗುತ್ತಿಲ್ಲ. ಒಂದು ಕಡೆ ಗೊಬ್ಬರ ಔಷಧಿಗಳು ಇತ್ಯಾದಿ ಬೆಲೆಗಳು ಗಗನದ ಮೇಲಕ್ಕೆ ಹೊರಟು ಹೋಗುತ್ತಿವೆ. ಮತ್ತೊಂದು ಕಡೆ ರೈತರು ಉತ್ಪಾದನೆ ಮಾಡತಕ್ಕದ್ದು ಹಾಲಾಗಲೀ, ರೇಷ್ಮೆಯಾಗಲೀ, ಯಾವುದೇ ಆಗಲೀ ಅದಕ್ಕೆ ಬೆಲೆಗಳು ಇಳಿಯುತ್ತಿವೆ. ಈ ಬಗ್ಗೆ ವಿವರಗಳಿಗೆ ನಾನು ಹೋಗುವುದಿಲ್ಲ. ರೈತರು ಉತ್ಪಾದನೆ ಮಾಡತಕ್ಕ ವಸ್ತುಗಳಿಗೆ ಬೆಲೆಯನ್ನು ದಿಢೀರನೆ ಇಳಿಸುವುದರಿಂದ ರೈತರಿಗೆ ಬಹಳ ಅನ್ಯಾಯವಾಗುತ್ತಿದೆ. ಸರ್ಕಾರದವರು ಏಕೆ ಈ ರೀತಿ ಮಾಡುತ್ತಿದ್ದಾರೆ ಎಂಬುದು ಅರ್ಥವಾಗುವುದಿಲ್ಲ. ಶ್ರೀ ಮಾಧುಸ್ವಾಮಿಯವರು ಹೇಳಿದ ಹಾಗೆ, ರೈತರಿಗೆ ಪೇಮೆಂಟನ್ನು ಕೂಡಲೇ ಕೊಡಿಸಬೇಕು. ಈ ಬಗ್ಗೆ ತತ್‌ಕ್ಷಣ ಏನು ಮಾಡುತ್ತೀರಿ ಎಂಬುದನ್ನು ಸರ್ಕಾರ ತಿಳಿಸಬೇಕು.

ಅಧ್ಯಕ್ಷರು:- ಅವರು ಎಲ್ಲರೂ ಹೇಳಿ ಮುಗಿಸಿದ ಮೇಲೆ ಉತ್ತರ ಹೇಳುತ್ತಾರೆ.

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ:- ಮೈಸೂರಿನ ಹಾಲಿನ ಕೇಂದ್ರದ ಬಗ್ಗೆ ಕೆಲವು ಮಾನ್ಯ ಸದಸ್ಯರುಗಳು ಮಾಡಿದ್ದಾರೆ, ಮತ್ತು ಹಾಲಿನ ಬೆಲೆ ಬಗ್ಗೆ ಸಹಾ ಪ್ರಸ್ತಾಪ ಮಾಡಿದ್ದಾರೆ. ಅವರುಗಳು ರೈತರು ಅನುಭವಿಸುತ್ತಿರುವ ಕಷ್ಟಗಳ ಬಗ್ಗೆ ವಿವರಿಸಿದ್ದಾರೆ. ಇದರ ಬಗ್ಗೆ ಪರಿಶೀಲನೆ ಮಾಡುತ್ತೇವೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್:- ಏನು ಪರಿಶೀಲನೆ ಮಾಡಬೇಕು. ಇದು ಮಾನ್ಯ ಮುಖ್ಯಮಂತ್ರಿಗಳಿಗೆ ಸಂಬಂಧಪಟ್ಟಿದ್ದುದು, ರಾತ್ರೋರಾತ್ರಿ ಅಧಿಕಾರಿಗಳನ್ನು ವರ್ಗ ಮಾಡಿದ್ದಾರೆ. ಅಲ್ಲಿ ಅನ್ಯಾಯ ನಡೆಯುತ್ತಿದೆ.

ಅಧ್ಯಕ್ಷರು:- ಮಾನ್ಯ ಸಚಿವರಿಗೆ ಹೇಳಲು ಅವಕಾಶ ಕೊಡಿ. ಅವರು ಇನ್ನೂ ಪೂರ್ತಿ ಮಾಡಿಲ್ಲ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ:- ವರ್ಗಾವಣೆಯನ್ನು ರದ್ದು ಮಾಡುತ್ತೇವೆ ಎಂದು ಹೇಳಿ....

ಶ್ರೀ ಕೆ.ಎಸ್. ಈಶ್ವರಪ್ಪ:- ಎಲ್ಲವನ್ನು ಪರಿಶೀಲನೆ ಮಾಡುತ್ತೇನೆ ಎಂದರೆ ಮಂತ್ರಿಗಳು ಏತಕ್ಕೆ ಇರಬೇಕು....

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ:- ಇಂತಹ ವಿಷಯಗಳನ್ನು ಪೂರ್ವ ಸೂಚನೆ ಕೊಟ್ಟು ಸಭೆಯ ಮುಂದೆ ತಂದರೆ ಸರ್ಕಾರದವರು ಏನಾದರೂ ತಯಾರು ಮಾಡಿಕೊಂಡು ಉತ್ತರ ಹೇಳಬಹುದು. ಏಕ್‌ದಮ್ ಈ ಸಭೆಯಲ್ಲಿ ವಿಷಯವನ್ನು ಪ್ರಸ್ತಾಪಿಸಿ ಉತ್ತರವನ್ನು ಹೇಳಬೇಕು ಎಂದರೆ ತಪ್ಪಾಗುತ್ತದೆ. ಈ ಸಭೆಯು ಸರಿಯಾಗಿ ನಡೆಯಲು ಮಾನ್ಯ ಸದಸ್ಯರು ಸಹಕರಿಸಬೇಕು.

ಅಧ್ಯಕ್ಷರು:- ಮಾನ್ಯ ಸಂಸದೀಯ ಸಚಿವರು ಏನು ಹೇಳಿದ್ದಾರೆ ಅದಕ್ಕೆ ನನ್ನ ಸಂಪೂರ್ಣ ಸಮ್ಮತಿ ಇದೆ. ತಾವು ದಿಢೀರನೆ ಆ ವಿಷಯವನ್ನು ಪ್ರಸ್ತಾಪಿಸಿ ಉತ್ತರ ಹೇಳಿ ಎಂದರೆ ಅವರು ಏನು ಸರ್ವಜ್ಞರೇ? ತಾವು ಸೂಚನೆ ಕೊಟ್ಟು ಕಳುಹಿಸಿ ಆ ಸೂಚನೆಯನ್ನು ಅನಂತರ ಚರ್ಚೆ ಮಾಡೋಣ ಇಲ್ಲದಿದ್ದರೆ ನಿಮಗೆ ಸಿಗುವುದು ಒಂದೇ ಉತ್ತರ ಪರಿಶೀಲನೆ ಮಾಡುತ್ತೇನೆ ಎಂದು.

ಶ್ರೀ ವಾಟಾಳ್ ನಾಗರಾಜ್:- ಸಂಜೆಯೊಳಗೆ ಉತ್ತರವನ್ನು ಕೊಡಿಸಿಕೊಡಿ ಸ್ವಾಮಿ.

ಶ್ರೀ ಆರ್.ವಿ. ದೇಶಪಾಂಡೆ:- ಈ ವಿಷಯದ ಬಗ್ಗೆ ಉತ್ತರ ಕೊಡುವುದಕ್ಕೆ ಏನೂ ತೊಂದರೆ ಇಲ್ಲ.

ಅಧ್ಯಕ್ಷರು:- ಸಂಜೆಯೊಳಗೆ ಎಂದು ಕಡ್ಡಾಯ ಮಾಡಲು ಹೋಗಬೇಡಿ, ಇತ್ತೀಚಿನ ದಿನಗಳಲ್ಲಿ ಸೂರ್ಯ ಬೇಗ ಮುಳುಗುತ್ತಾನೆ.

## ಹಕ್ಕುಚ್ಯುತಿ ಸೂಚನೆಯ ಪ್ರಸ್ತಾಪ

**4) ಶ್ರೀ ಸತೀಶ್ ಜಾರ್ಕಿವಳ್ಳಿ ಮತ್ತು ಸಂಗಡಿಗರಿಂದ ಆರೋಪ**

ಶ್ರೀ ವಿ.ಎಸ್. ಕೌಜಲಗಿ:- ಮಾನ್ಯ ಅಧ್ಯಕ್ಷರೆ, ನಿಯಮ 190ರ ಮೇರೆಗೆ ಹಕ್ಕುಚ್ಯುತಿ ಬಗ್ಗೆ ಒಂದು ನೋಟೀಸನ್ನು ತಮಗೆ ಕಳುಹಿಸಿದ್ದೇನೆ. ದಿನಾಂಕ 8-1-93ರ ಈ ಸಂಜೆ ಪತ್ರಿಕೆಯಲ್ಲಿ ಜಾಹಿರಾತು ಪ್ರಕಟವಾದಂತೆ ಶ್ರೀಮಾನ್ ಸತೀಶ್ ಜಾರ್ಕಿವಳ್ಳಿ ಮತ್ತು ಅವರ ಸಂಗಡಿಗರು ಕೆಲವು ಆರೋಪಗಳನ್ನು ಮುಖ್ಯಮಂತ್ರಿಗಳ ಮತ್ತು ಸದನಕ್ಕೆ ಈ ಪತ್ರಿಕೆಯ ಜಾಹಿರಾತು ಮುಖಾಂತರ ತರಲು ಪ್ರಯತ್ನಿಸಿದ್ದಾರೆ. ಶ್ರೀ ಸತೀಶ್ ಜಾರ್ಕಿವಳ್ಳಿಯವರು ಈಗಾಗಲೇ ಕೊಲೆ ಆರೋಪದಲ್ಲಿ ಸಿಲುಕಿಕೊಂಡಂತಹ ವ್ಯಕ್ತಿ. ಅಬಕಾರಿ ಗುತ್ತಿಗೆಯಿಂದ ಅಪ್ರಾಮಾಣಿಕವಾಗಿ ಸಾಕಷ್ಟು ಹಣವನ್ನು ಸಂಪಾದನೆ ಮಾಡಿ ತನ್ನ ದುಡ್ಡಿನ ದರ್ಪದಿಂದ ನಮ್ಮ ರಾಜಕೀಯ ತೇಜೋವಧೆ ಮಾಡಬೇಕೆಂದು ದಿನಪತ್ರಿಕೆಯಲ್ಲಿ ಪ್ರಕಟಿಸಿದಂತೆ ಘಟಪ್ರಭ ಸಹಕಾರಿ ಸಕ್ಕರೆ ಕಾರ್ಖಾನೆಯಲ್ಲಿ ಯಾವುದೇ ವಸ್ತುವನ್ನು ಖರೀದಿ ಮಾಡಬೇಕಾದರೆ, ಖರೀದಿಯ ಒಂದು ಸಬ್ ಕಮಿಟಿ ಇರುತ್ತದೆ.